**ಸಾಕ್ಷಿಯನ್ನು ದಿಃ 10.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದಃ-**

ಲಿಖಿತ ತಕರಾರು ತಯಾರು ಮಾಡಲು ವಕೀಲರಿಗೆ ಮಾಹಿತಿ ಕೊಡವಾಗ ಯಾವುದೆ ದಾಖಲೆ ಕೊಡಿ ಮಾಹಿತಿ ಕೊಟ್ಟಿಲ್ಲ ಆದ ಕಾರಣ ನಾನು ಯಾವುದೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ವಾದಿಗಳು ಯಾವುದೆಲ್ಲಾ ದಾಖಲೆ ಹಾಜರು ಪಡಿಸಿದ್ದಾರೆ ಎಂದು ನಾನು ನೋಡಿದ್ದೇನೆ. ನಿಪಿ. 2, 4, 6 ಮತ್ತು 7 ರ ಜಮೀನು ಮತ್ತು ಮನೆ ಸ್ವಯಾರ್ಜಿತ ಎಂದು ತೋರಿಸಲು ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಸ್ವತ್ತುಗಳು ಸ್ವಯಾರ್ಜಿತ ಸ್ವತ್ತುಗಳಲ್ಲದ ಕಾರಣ ಯಾವುದೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಗನಿಗೆ ದಾನ ಬರೆಯಲು ನನಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಾವಾ ಸ್ವತ್ತುಗಳನ್ನು ಖರೀದಿ ಮಾಡುವಾಗ ನನಗೆ ಯಾವ ಆದಾಯದ ಮೂಲ ಇತ್ತು ಎಂದು ಇಲ್ಲಿಯವರೆಗೂ ದಾಖಲೆಯನ್ನು ಹಾಜರು ಪಡಿಸಿಲ್ಲ.

ನಿಪಿ. 8 ರ ದಾಖಲೆಯ ಪ್ರಕಾರ ಐಟಂ ನಂ. 6 ರ ದಾವಾ ಸ್ವತ್ತು ಕೆ.ಎಂ. ಕೃಷ್ಣೇ ಅರಸ್ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಕೆ.ಎಂ. ಕೃಷ್ಣೇ ಅರಸ್ ರವರು ನನ್ನ ಗಂಡ. ಸದರಿ ಸ್ವತ್ತು ಗಂಡ ಕೆ.ಎಂ.ಕೃಷ್ಣೇ ಅರಸ್ ರವರಿಗೆ ಸೇರಿದ್ದು, 2 ನೇ ಪ್ರತಿವಾದಿ ಆದ ನನ್ನ ಮಗ ಕಂದಾಯ ಅಧಿಕಾರಿಗಳೊಂದಿಗೆ ಷಾಮಿಲಾಗಿ ತನ್ನ ಹೆಸರಿಗೆ ಖಾತೆ ಬದಲಾಯಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನನ್ನ ಹೆಸರು ಇರುವುದಿಲ್ಲ. ಸದರಿ ಸ್ವತ್ತು ನಮ್ಮದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿಯ ಅನುಪಸ್ಥಿತಿಯಲ್ಲಿ ಮೋಸದಿಂದ 2 ನೇ ಪ್ರತಿವಾದಿ ಐಂಟ ನಂ. 6 ರ ಖಾತೆಯನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಐಟಂ ನಂ. 6 ರಲ್ಲಿ 10 ಮಳಿಗೆಗಳು ಇವೆ ಎಂದರೆ ಸರಿ. ಒಂದೊಂದು ಮಳಿಗೆಯಲ್ಲೂ 8 ರಿಂದ 10 ಸಾವಿರ ರೂ. ಹಣ ಬಾಡಿಗೆ ಬರುತ್ತದೆ ಎಂದರೆ ಅಷ್ಟೊಂದು ಬಾಡಿಗೆ ಬರುವುದಿಲ್ಲ ಅದರೆ ಎಷ್ಟು ಬರುತ್ತದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನನ್ನ ಮಗನಿಗೆ ಮೈಸೂರಿನ ಹಿನಕಲ್ ಪಕ್ಕ ಒಂದು ವಾಸದ ಮನೆ ಇದೆ ಎಂದರೆ ಸರಿ. ಅದು ಸಹ ಒಟ್ಟು ಕುಟುಂಬದ ಅಸ್ತಿ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಅದಾಯದಿಂದ 2 ನೇ ಪ್ರತಿವಾದಿ ವಾಸ ಇರುವ ಮನೆಯನ್ನು ಕಟ್ಟಿರುವುದು ಎಂದರೆ ಸರಿಯಲ್ಲ. ವಿಷಯ ಗೊತ್ತಾಗುತ್ತದೆ ಎಂದು ಸದರಿ ಮನೆಯ ಗೃಹ ಪ್ರವೇಶಕ್ಕೆ ವಾದಿಯನ್ನು ಕರೆದಿಲ್ಲ ಎಂದರೆ ಸರಿಯಲ್ಲ. ವಾದಿ ತನ್ನ ತಂದೆ ಕೆ.ಎಂ.ಕೃಷ್ಣೇ ಅರಸ್ ರವರಿಂದ ಕೆಲವು ಆಸ್ತಿಗಳನ್ನು ಪಡೆದುಕೊಂಡಿದ್ದರು ಎಂದು ವಕೀಲರಿಗೆ ಹೇಳಿ ಬರೆಸಿಲ್ಲ. ವಾದಿ ಮನೆ ಕಟ್ಟಲು ಕೆ.ಎಂ.ಕೃಷ್ಣೇ ಅರಸ್ ರವರೆ ಹಣ ಕೊಟ್ಟಿದ್ದರು ಎಂದು ವಕೀಲರಲ್ಲಿ ಹೇಳಿ ಬರೆಸಿಲ್ಲ. ನಾನು, ನನ್ನ ಮಗ ಮತ್ತು ಇತರೆ ಪ್ರತಿವಾದಿಗಳು ಸೇರಿಕೊಂಡು ವಾದಿಯನ್ನು ಸಂಪೂರ್ಣವಾಗಿ ಕಡೆಗಣಿಸಿದ್ದೇವೆ ಎಂದರೆ ಸರಿಯಲ್ಲ. ಅಲ್ಲದೆ ನಮ್ಮ ಕುಟುಂಬದ ಯಾವುದೆ ಸಮಾರಂಭಗಳಿಗೂ ಆಕೆಯನ್ನು ಕರೆಯುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಂದ ಬರುವ ಆದಾಯವನ್ನು ಸಹ ವಾದಿಗೆ ಕೊಟ್ಟಿಲ್ಲ ಎಂದರೆ ಯಾವುದೆ ಆದಾಯ ಇರಲಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತು, ಐಟಂ ನಂ. 6 ವಾದಿಗೆ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ವಾದಿಗೆ ಭಾಗವನ್ನು ಕೊಡುವುದರಿಂದ ತಪ್ಪಿಸಿಕೊಳ್ಳಲು ಮಗನ ಮೇಲಿನ ಪ್ರೀತಿಯಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.